C.R.P.67

| |
|---|
| Form No.4 (Civil)<br>Deposition Sheets<br>(R.P.No.57) |

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.121/2021 ಸಿ. ಡಬ್ಲ್ಯೂ- 27 ಪಿ. ಡಬ್ಲ್ಯೂ-22

ದಿನಾಂಕಃ- 02.08.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ವಿ. ಆರ್. ಶೌರ್ಯ ಗೌಡ |
| ತಂದೆಯ ಹೆಸರು | ವಿ. ಸಿ. ರಮೇಶ |
| ವಯಸ್ಸು | 34 ವರುಷ |
| ಉದ್ಯೋಗ | ಸಂಭ್ರಮ ನ್ಯೂಸ್ ಚಾನಲ್ ನಲ್ಲಿ ಚೀಫ್ ಎಡಿಟರ್ |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

1. ಈ ಪ್ರಕರಣದಲ್ಲಿ 6 ನೇ ಆರೋಪಿ ಆಗಿರುವ ಸ್ವರೂಪ ಗೌಡನ ಪರಿಚಯ ನನಗೆ ಇದೆ. 6 ನೇ ಆರೋಪಿಯು ಸಂಭ್ರಮ ನ್ಯೂಸ್ ಚಾನಲ್ ನಲ್ಲಿ office boy ಅಗಿ ಕೆಲಸ ಮಾಡುತ್ತಾ ಇದ್ದನು. ಸದರಿ 6 ನೇ ಆರೋಪಿಯು ನಮ್ಮ ಸುದ್ದಿ ವಾಹಿನಿಯಲ್ಲಿ (ನ್ಯೂಸ್ ಚಾನಲ್) ಕರ್ತವ್ಯ ಮಾಡುತ್ತಾ ಇದ್ದಾಗ ನಮ್ಮ ಕಛೇರಿಯಿಂದ ಆತನಿಗೆ ಒಂದು ಸಂಚಾರಿ ದೂರವಾಣಿ (mobile phone) ಕೊಡಲಾಗಿತ್ತು ಮತ್ತು ಅದಕ್ಕೆ 8088067739 ಸಂಖ್ಯೆಯ sim card ಅನ್ನು ಅಳವಡಿಸಲಾಗಿತ್ತು.

2. 2020 ನೇ ಇಸವಿ ಕೊನೆಯ ಭಾಗದಲ್ಲಿ ಮತ್ತು 2021 ನೇ ಇಸವಿಯ ಪ್ರಾರಂಭದಲ್ಲಿ ಸುಮಾರು 4 ತಿಂಗಳ ಕಾಲ 6 ನೇ ಆರೋಪಿಯು ನಮ್ಮ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡಿದ್ದಾನೆ. ಮೇಲೆ ಹೇಳಿದ sim card ಅನ್ನು ನನ್ನ ಹೆಸರಿನಲ್ಲಿಯೇ ಖರೀದಿ ಮಾಡಲಾಗಿತ್ತು.

3.ನಂತರ ಸದರಿ 6 ನೇ ಆರೋಪಿಯು ನಮ್ಮ ಕಛೇರಿಯಿಂದ ರಜಾ ತೆಗೆದುಕೊಂಡು ಹೋದನು ಮತ್ತು ಆತನು ಮತ್ತೇ ನಮ್ಮ ವಾಹಿನಿಗೆ ಬರಲೇ ಇಲ್ಲ. 6 ನೇ ಆರೋಪಿಯು ಆ ರೀತಿ ರಜಾ ತೆಗೆದುಕೊಂಡು ಹೋಗುವಾಗ ನಮ್ಮ ವಾಹಿನಿಯಿಂದ ಆತನಿಗೆ ಕೊಟ್ಟಿದ್ದ ಸಂಚಾರಿ ದೂರವಾಣಿಯನ್ನು ಕಛೇರಿಯಲ್ಲಿಯೇ ಇಟ್ಟು ಹೋಗಿದ್ದನು. ಆ ಸಂಚಾರಿ ದೂರವಾಣಿಯಲ್ಲಿ ಮೇಲೆ ಹೇಳಿದ ಸಂಖ್ಯೆಯ sim card ಇದೆ ಎಂದು ನಾವು ಭಾವಿಸಿದ್ದೆವು.

4. ನಮ್ಮ ವಾಹಿನಿಯಲ್ಲಿ ಒಬ್ಬ ನೌಕರನಿಗೆ ಕೊಟ್ಟ sim card ಅನ್ನು ಬೇರೆ ನೌಕರರಿಗೆ ಕೊಡುವುದಿಲ್ಲ.

5. ಇದೆಲ್ಲಾ ಆದ ಸುಮಾರು 6–7 ತಿಂಗಳ ನಂತರ ಒಂದು ದಿನ ಮದ್ದೂರು ಪೊಲೀಸ್ ಠಾಣೆಯಿಂದ ನನಗೆ ದೂರವಾಣಿ ಕರೆ ಬಂತು ಮತ್ತು ಪೊಲೀಸರು "ಮದ್ದೂರಿನಲ್ಲಿ ಒಂದು ಕೊಲೆಯಾಗಿದೆ ಮತ್ತು ನಿಮಗೆ ಸೇರಿದ Sim card ಅನ್ನು ಸ್ವರೂಪ ಎಂಬ ಆರೋಪಿಯು ಬಳಸುತ್ತಾ ಇದ್ದನು" ಎಂದು ನನಗೆ ಹೇಳಿದರು. ಆಗ ನಾನು ಸದರಿ ಸ್ವರೂಪ ಎಂಬುವವನು ನಮ್ಮ ವಾಹಿನಿಯಲ್ಲಿ ಕೆಲಸ ಮಾಡುತ್ತಾ ಇದ್ದ ವಿಷಯವನ್ನು ಮತ್ತು ನಮ್ಮ ವಾಹಿನಿಯಿಂದ ಆತನಿಗೆ ಸಂಚಾರಿ ದೂರವಾಣಿಯನ್ನು ಕೊಟ್ಟಿದ್ದ ವಿಷಯವನ್ನು ಪೊಲೀಸರಿಗೆ ಹೇಳಿದೆನು.

<u>ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಸಿ. ಪಿ. ವಕೀಲರಿಂದಃ–</u>

6. ನಮ್ಮ ಸುದ್ದಿ ವಾಹಿನಿಯು ಬೆಂಗಳೂರಿನ ಚಂದ್ರ ಲೇಔಟ್ ಬಡಾವಣೆಯಲ್ಲಿದೆ. ನಮ್ಮ ಸುದ್ದಿ ವಾಹಿನಿಯಲ್ಲಿ ಸುಮಾರು 150 ಜನರು ಕೆಲಸ ಮಾಡುತ್ತಾರೆ. ನಮ್ಮ ವಾಹಿನಿಯಲ್ಲಿ ಕೆಲಸ ಮಾಡುತ್ತಾ ಇರುವ ವ್ಯಕ್ತಿಗಳ ಬಗ್ಗೆ ದಾಖಲೆಗಳು ಇವೆ. ಆ ದಾಖಲೆಗಳನ್ನು ಕೊಡಿ ಎಂದು ಪೊಲೀಸರು ನನ್ನನ್ನು ಕೇಳಿರುವುದಿಲ್ಲ.

7. ಯಾವ ತಿಂಗಳಿನಲ್ಲಿ ಸ್ವರೂಪ ಗೌಡನಿಗೆ ನಾನು ಮೇಲೆ ಹೇಳಿದ Sim card ಅನ್ನು ಕೊಟ್ಟಿದ್ದೇನೆ ಎಂದು ಹೇಳಲು ನನಗೆ ನೆನಪಿಲ್ಲ. ಆ ಸಂಚಾರಿ ದೂರವಾಣಿಯನ್ನು ಸದರಿ ಸ್ವರೂಪ ಎನ್ನುವವನು ನಮ್ಮ ವಾಹಿನಿಯ ಯಾವ ವಿಭಾಗದಲ್ಲಿ ಕೊಟ್ಟು ಹೋಗಿದ್ದನು ಎಂದು ನನಗೆ ಗೊತ್ತಿಲ್ಲ.

8. ಸ್ವರೂಪ ಎನ್ನುವವನು ನಮ್ಮ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುತ್ತಾ ಇರಲಿಲ್ಲ ಮತ್ತು ಆತನಿಗೆ ಮೇಲೆ ಹೇಳಿದ Sim card ಅನ್ನು ನಾನು ಕೊಟ್ಟಿರಲಿಲ್ಲ ಮತ್ತು ಈ ಸಂಬಂಧವಾಗಿ ಈ ನ್ಯಾಯಾಲಯದ ಮುಂದೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

9. ನಾನು ಮದ್ದೂರು ಪೊಲೀಸ್ ಠಾಣೆಗೆ ಬಂದಾಗ ಮೇಲೆ ಹೇಳಿದ ಸಂಚಾರಿ ದೂರವಾಣಿಯನ್ನು ಅಂದರೆ ನಮ್ಮ ವಾಹಿನಿಯಿಂದ ಸ್ವರೂಪನಿಗೆ ಕೊಟ್ಟಿದ್ದ ಸಂಚಾರಿ ದೂರವಾಣಿಯನ್ನು ನಾನು ತೆಗೆದುಕೊಂಡು ಬಂದಿರಲಿಲ್ಲ.

<u>ಮರು ವಿಚಾರಣೆಃ- ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

ಏನೂ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.